ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಜೆ.ಎಲ್.ಬಿ. ರಸ್ತೆ, ಅಶೋಕ ವೃತ್ತದ ಹತ್ತಿರ, ಲಕ್ಷ್ಮೀಪುರಂ, ಮೈಸೂರು – ೫೭೦ ೦೦೪,
ಕರ್ನಾಟಕ, ಭಾರತ
ದೂ: (ಕ) (೦೮೨೧) ೨೪೦೦೨೧೪೧, ಫ್ಯಾಕ್ಸ್: ೨೪೦೦೨೧೪೪

ಸಂಖ್ಯೆ : ಕೆಎಸ್‌ಜಿಹೆಚ್/ಸಂ.ಪ್ರ.ಕ.ವಿ/ಕು.ಆ.ಶಾ-69/2017-18 ದಿನಾಂಕ :14.12.2017

ಪ್ರೊ. ನಿರಂಜನ
ಕುಲಸಚಿವರು

## ಕಛೇರಿ ಸುತ್ತೋಲೆ

ವಿಷಯ: ನಮ್ಮ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವ ಕುರಿತು.

ನಮ್ಮ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತಿಳಿಸುವುದೇನೆಂದರೆ ಉನ್ನತ ಶಿಕ್ಷಣ ಇಲಾಖೆಯ ಸೂಚನೆಯನುಸಾರ ನವ ಕರ್ನಾಟಕ ವಿಷನ್ 2025ಗೆ ಸಂಬಂಧಿಸಿದಂತೆ "ನನ್ನ ಕನಸಿನ ಕರ್ನಾಟಕ - 2025" ಇಂಗ್ಲೀಷ್‌ನಲ್ಲಿ " Karnataka My Dream - 2025" ಎಂಬ ವಿಷಯದ ವಿಶ್ವವಿದ್ಯಾಲಯದ ಹಾಗೂ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ದಿನಾಂಕ: 16.12.2017ರ ಮಧ್ಯಾಹ್ನ 02.30 ರಿಂದ 04.00ರ ವರೆಗೆ ವಿಶ್ವವಿದ್ಯಾಲಯದ ಕೊಠಡಿ ಸಂಖ್ಯೆ-01ರಲ್ಲಿ ಏರ್ಪಡಿಸಲಾಗಿದೆ. ವಿಶ್ವವಿದ್ಯಾಲಯದಲ್ಲಿ ಎಲ್ಲಾ ವಿಭಾಗದ ಆಸಕ್ತ ವಿದ್ಯಾರ್ಥಿಗಳು ಈ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬಹುದೆಂದು ಈ ಮೂಲಕ ಸೂಚಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಂಗೀತ ವಿಭಾಗದ ಅಧ್ಯಾಪಕರಾದ ಶ್ರೀಮತಿ ಜೆ.ಎಲ್. ಪುಷ್ಪ ಅವರನ್ನು ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಈ ಪ್ರಬಂಧ ಸ್ಪರ್ಧೆಯ ನಿಯಮಗಳು ಈ ಕೆಳಕಂಡಂತಿವೆ.

1. ಪ್ರಬಂಧವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಯಬಹುದು.
2. ಪ್ರಬಂಧವು 700 ರಿಂದ 1000 ಶಬ್ದಗಳನೊಳಗೊಂಡಿರಬೇಕು.
3. ರಾಜ್ಯಮಟ್ಟದಲ್ಲಿ ಆಯ್ಕೆಯಾದ ಅತ್ಯುತ್ತಮ ಕನ್ನಡ ಮತ್ತು ಇಂಗ್ಲೀಷ್ ಪ್ರಬಂಧಗಳಿಗೆ ತಲಾ ಮೊದಲ ಬಹುಮಾನ ರೂ. 25000/- ಎರಡನೇ ಬಹುಮಾನ 15000/- ಹಾಗೂ ಮೂರನೇ ಬಹುಮಾನವಾಗಿ 10000/- ಗಳ ನಗದು ಬಹುಮಾನ ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಆಯ್ಕೆಯಾದ ಅತ್ಯುತ್ತಮ ಪ್ರಬಂಧಕ್ಕೆ ರೂ. 5000/- ನಗದು ಬಹುಮಾನ ಮತ್ತು ಮುಖ್ಯಮಂತ್ರಿಗಳ ಸಹಿ ಇರುವ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ.
4. ವಿಶ್ವವಿದ್ಯಾಲಯದಿಂದ ಆಯ್ಕೆಯಾಗುವ ಅತ್ಯುತ್ತಮ ಪ್ರಬಂಧವನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗುವುದು.
5. ಆಯ್ಕೆಯಾದ ಅತ್ಯುತ್ತಮ ಪ್ರಬಂಧವನ್ನು ನವ ಕರ್ನಾಟಕ 2025ರ ಸಾಮಾಜಿಕ ಜಾಲತಾಣ ಹಾಗೂ ವೆಬ್ ಸೈಟ್‌ಗಳಲ್ಲಿ ಸರ್ಕಾರದ ಅಧಿಕೃತ ಘೋಷಣೆಯೊಂದಿಗೆ ಪ್ರಕಟಿಸಲಾಗುವುದು.

ಕುಲಸಚಿವರು